ಓ ಎಸ್ ನಂಃ 21/2016

ಪಿ. ಡಬ್ಲ್ಯೂ ಃ 2

ದಿಃ 02.03.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲು ಃ ಪ್ರತಿವಾದಿ ಪರ ಶ್ರೀ ಎಂ ಎನ್ ವಕೀಲರಿಂದ ಃ

ದಾವಾ ಸ್ವತ್ತಿನಲ್ಲಿ 12 ಎಕರೆ 10 ಗುಂಟೆ ಇತ್ತು ಎಂದರೆ ಸರಿ. ಅದರಲ್ಲಿ 11 ಗುಂಟೆ ಖರಾಬು ಹೋಗಿ 11 ಎಕರೆ 39 ಗುಂಟೆ ಇತ್ತು ಎಂದು ಸಾಕ್ಷಿ ಹೇಳುತ್ತಾರೆ. ಚಂದ್ರಪ್ಪ, ಗಂಗಾಧರಪ್ಪ ಮತ್ತು ಜಯಣ್ಣ ಇವರ ಮದ್ಯೆ ಆ ಸ್ವತ್ತು ಭಾಗ ಆಗಿದೆ. ಆ ಸಮಯದಲ್ಲಿ ನಾನು ಹುಟ್ಟಿರಲಿಲ್ಲ. ಅದ್ದರಿಂದ ಯಾರಿಗೆ ಎಷ್ಟು ಸ್ವತ್ತು ಹೋಗಿತ್ತು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಆದರೆ ಭಾಗಪಪಟ್ಟಿಯನ್ನು ನೋಡಿದ್ದೇನೆ ಎಂದು ಸಾಕ್ಷಿ ಹೇಳುತ್ತಾರೆ. ಸದರಿ ಭಾಗಪಟ್ಟಿ ನನ್ನ ದೊಡ್ಡಪ್ಪ ವಾದಿಯ ಬಳಿ ಇತ್ತು. ಅದನ್ನು ನ್ಯಾಯಾಲಯಕ್ಕೆ ಕೊಟ್ಟಿದ್ದಾರೆ. ಭಾಗಪತ್ರದಲ್ಲಿ ಯಾವ್ಯಾವ ಷೆಡ್ಯೂಲ್ ಗಳಿತ್ತು ಎಂದು ನೋಡಿದ್ದೇನೆ. ಸಾಕ್ಷಿ ಪುನಃ ಹೇಳುತ್ತಾರೆ ಭಾಗಪಟ್ಟಿಯಲ್ಲಿ ಯಾವುದೆ ಬೇರೆ ಷೆಡ್ಯೂಲ್ ಗಳು ಆಗಿಲ್ಲ, ಒಂದೇ ಸ್ವತ್ತನ್ನು ಅವರು ಭಾಗ ಮಾಡಿಕೊಂಡಿದ್ದಾರೆ ಎಂದು ಸಾಕ್ಷಿ ಹೇಳುತ್ತಾರೆ.

ಚಂದ್ರಪ್ಪ ಇವರಿಗೆ ಸ.ನಂ. 1 ರಲ್ಲಿ ಉತ್ತರದ ದಿಕ್ಕಿನಲ್ಲಿ 4 ಎಕರೆ ಕೊಟ್ಟಿದ್ದರು, ಮದ್ಯದ 4 ಎಕರೆ ಯನ್ನು ಗಂಗಾಧರಪ್ಪ ಇವರಿಗೆ, ದಕ್ಷಿಣಕ್ಕೆ 3 ಎಕರೆ 39 ಗುಂಟೆಯನ್ನು ಜಯಣ್ಣ ಇವರಿಗೆ ಕೊಟ್ಟಿದ್ದರು. ಆ ಸ್ವತ್ತಿನ ಪೂರ್ವಭಾಗದಲ್ಲಿ ತಲಾ ಅರ್ಧ ಎಕರೆಯನ್ನು ಮನೆ ಕಟ್ಟುವ ಉದ್ದೇಶದಿಂದ ಬಿಟ್ಟಿದ್ದರು. ಪೂರ್ವದ 20 ಗುಂಟೆ ನಮ್ಮ ತಾತ ಚಂದ್ರಪ್ಪ ಇವರಿಗೆ ಬಂದಿತ್ತು. ಪಶ್ಚಿಮದ 20 ಗುಂಟೆಯನ್ನು ಗಂಗಾಧರಪ್ಪ ಇವರಿಗೆ ಕೊಟ್ಟಿದ್ದಾರೆ. ಅವರ ಪಕ್ಕದಲ್ಲಿ 20 ಗುಂಟೆಯನ್ನು ಜಯಣ್ಣ ಇವರಿಗೆ ಕೊಟ್ಟಿದ್ದಾರೆ. ಜಯಣ್ಣ ಇವರಿಗೆ ಒಬ್ಬ ಮಗ ಮತ್ತು 3 ಜನ ಹೆಣ್ಣು ಮಕ್ಕಳು ಅವರೆಂದರೆ ಶಿವಶಂಕರ , ಪದ್ಮ , ಲಲಿತಮ್ಮ ಮತ್ತು ಭಾಗ್ಯಮ್ಮ ಇರುತ್ತಾರೆ. ಭಾಗ್ಯಮ್ಮ ಇವರು ಈಗ ತೀರಿಕೊಂಡಿದ್ದಾರೆ ಜಯಣ್ಣ ಇವರ ಕುಟುಂಬದಲ್ಲಿ ಇನ್ನೂ ಭಾಗ ಆಗಿಲ್ಲ ಎಂದರೆ ಸರಿ. ಜಯಣ್ಣ ಇವರ ಸ್ವತ್ತನ್ನು ಅವರ ಮಗ ಶಿವಶಂಕರ ವಾದಿಗೆ ಮಾರಾಟ ಮಾಡಿದ್ದಾರೆ.

ಸ.ನಂ 4/1 ರಲ್ಲಿ 2 ಎಕರೆ 1 ಗುಂಟೆ, ಸ.ನಂ. 25 ರಲ್ಲಿ 10 ವರೆ ಗುಂಟೆ , ಸ.ನಂ. 26 ರಲ್ಲಿ 18

ವರೆ ಗುಂಟೆಯನ್ನು ಶಿವಶಂಕರ ವಾದಿಗೆ ಮಾರಾಟ ಮಾಡಿದ್ದಾರೆ. ಇವೆಲ್ಲ ಒಟ್ಟು ಕುಟುಂಬದ ಪಿತ್ರಾರ್ಜಿತ ಸ್ವತ್ತುಗಳೆಂದರೆ ಸರಿ.  ಆ ಸ್ವತ್ತುಗಳು ಜಯಣ್ಣ ಇವರ ಭಾಗಕ್ಕೆ ಬಂದಿದ್ದವು. ಗಂಗಾಧರಯ್ಯ ಇವರಿಗೆ 4 ಜನ ಗಂಡು ಮಕ್ಕಳು ಮತ್ತು ಒಬ್ಬಳು ಹೆಣ್ಣು ಮಗಳು ಅವರೆಂದರೆ ಬಸವರಾಜು, ಚಂದ್ರಶೇಖರ , ಪರಮಶಿವಯ್ಯ ಮತ್ತು ಗುರುಬಸವಯ್ಯ ಮತ್ತು  ರತ್ನಮ್ಮ ಇರುತ್ತಾರೆ. ಗಂಗಾಧರಪ್ಪ ಇವರಿಗೆ ಬಂದ ಸ್ವತ್ತನ್ನು ಅವರ 4 ಜನ ಗಂಡು ಮಕ್ಕಳು ಭಾಗ ಮಾಡಿಕೊಂಡಿದ್ದಾರೆ. ಯಾವ ವರ್ಷದಲ್ಲಿ ಭಾಗ ಮಾಡಿಕೊಂಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಆ ಬಗ್ಗೆ ಯಾವುದೆ ದಾಖಲೆಯನ್ನು ನೋಡಿಲ್ಲ. ಆದರೆ ಕಂದಾಯ ದಾಖಲೆಯನ್ನು ನೋಡಿದ್ದೇನೆ ಎಂದು ಸಾಕ್ಷಿ ಹೇಳುತ್ತಾರೆ.

ಮನೆಗಾಗಿ ಬಿಟ್ಟ ಸ್ವತ್ತು ಮತ್ತು ಬಾಕಿ ಸ್ವತ್ತುಗಳು ಒಂದಕ್ಕೊಂದು ಲಗತ್ತಾಗಿ ಇದ್ದವು.  20 ಗುಂಟೆಗೆ ಪ್ರತ್ಯೇಕ ಚೆಕ್ ಬಂದಿ ಇದೆ ಮತ್ತು 3 ಎಕರೆ 21 ಗುಂಟೆಗೆ ಪ್ರತ್ಯೇಕ ಚೆಕ್ ಬಂದಿ ಬರುತ್ತದೆ ಎಂದರೆ ಸರಿ. ವಾದಿಗೆ ಕೊಟ್ಟಿದ್ದ 20 ಗುಂಟೆ ಚೆಕ್ ಬಂದಿ ಗೊತ್ತು. ಪೂರ್ವಕ್ಕೆ ದೊಳ್ಳೆನಹಳ್ಳಿ ಬಸವರಾಜು ಇವರು ಜಮೀನು,  ಪಶ್ಚಿಮಕ್ಕೆ  ಗಂಗಾಧರಯ್ಯ ಇವರ ಮಗ ಚಂದ್ರಶೇಖರ್ ಇವರ ಸ್ವತ್ತು, ಉತ್ತರಕ್ಕೆ ಗ್ರಾಮದ ರಸ್ತೆ, ದಕ್ಷಿಣಕ್ಕೆ ರಾಜು ಕಾಲುವೆ ಇರುತ್ತದೆ.  ಅದೇ ರೀತಿ 3 ಎಕರೆ 21 ಗುಂಟೆ ಜಮೀನಿನ ಚೆಕ್ ಬಂದಿ ಗೊತ್ತು. ಪೂರ್ವಕ್ಕೆ ದೊಳ್ಳೆನಹಳ್ಳಿ ಗ್ರಾಮ ಠಾಣಾ ಮತ್ತು ರಸ್ತೆ, ಪಶ್ಚಿಮಕ್ಕೆ ಸ.ನಂ. 45 ಮತ್ತು ಸಿದ್ದಗಂಗಮ್ಮ ಇವರ ಜಮೀನು , ಉತ್ತರಕ್ಕೆ ಲೇಟ್ ದೊಡ್ಡರಾಮಯ್ಯ ಇವರ ಜಮೀನು ಮತ್ತು ದಕ್ಷಿಣಕ್ಕೆ ಸ.ನಂ. 1 ರಲ್ಲಿ ಗಂಗಾಧರಪ್ಪ ಇವರ ಜಮೀನು ಇರುತ್ತದೆ. ವಾದಿಯು 3 ಎಕರೆ 21 ಗುಂಟೆ ಸ್ವತ್ತಿನಲ್ಲಿ ಮನೆ ಕಟ್ಟಿದ್ದಾರೆ.  ಸ.ನಂ. 1 ರಲ್ಲಿ ಖರಾಬು ಹೊರತುಪಡಿಸಿ ಐನು ಜಮೀನಿನಲ್ಲಿ ಎಲ್ಲರಿಗೂ ಸಮಭಾಗ ಕೊಟ್ಟಿದ್ದರು ಎಂದರೆ ಸರಿ. ಜಯಣ್ಣ ಇವರಿಗೆ 1 ಗುಂಟೆ ಕಡಿಮೆ ಕೊಟ್ಟಿದ್ದರು ಎಂದು ಸಾಕ್ಷಿ ಹೇಳುತ್ತಾರೆ.  ಭಾಗವಾದಾಗ ಯಾರು ಯಾವ ಸ್ವತ್ತಿನಲ್ಲಿ ಸ್ವಾಧೀನದಲ್ಲಿದ್ದರೋ ಈಗಲೂ ಹಾಗೇ ಇರುತ್ತಾರೆ.  ಸ.ನಂ. 1 ರಲ್ಲಿ ರಸ್ತೆ ಇಲ್ಲ.

ಸ.ನಂ. 1 ರಲ್ಲಿ ರಸ್ತೆ ಇದೆ ಎಂದು ಮಹಾಂತಯ್ಯ ಎಂಬುವವರು ಓ ಎಸ್ 29/2012 ಎನ್ನುವ ದಾವೆಯನ್ನು ವಾದಿಯ ಮೇಲೆ ಹಾಕಿದ್ದರು ಎಂದರೆ ನನಗೆ ಗೊತ್ತಿಲ್ಲ.  ಅದು ಇನ್ನೂ ಚಾಲ್ತಿಯಲ್ಲಿದೆ ಎಂದರೆ ನನಗೆ ಗೊತ್ತಿಲ್ಲ ಎಂದು ಸಾಕ್ಷಿ ಹೇಳುತ್ತಾರೆ. ವಾದಿಯು ತನ್ನ ಜಮೀನಿಗೆ ಕಲ್ಲು

ಕುಂಚಗಳನ್ನು ಹಾಕಿಕೊಂಡಿದ್ದಾರೆ ಎಂದರೆ ಸರಿ. ಅವರ ಜಮೀನಿನಲ್ಲಿ ತೇಗದ ಮರಗಳನ್ನು ಹಾಕಿಸಿದ್ದಾರೆ ಎಂದರೆ ಸರಿ. ಆ ಮರಗಳು ಸುಮಾರು 20 ವರ್ಷದ ಮರಗಳಿರುತ್ತವೆ, 40 ವರ್ಷದ ಮರಗಳೆಂದರೆ ಸರಿಯಲ್ಲ. ದಿನಾಂಕ : 23.08.2010 ರಲ್ಲಿ ವಾದಿಯು ಅಳತೆ ಮಾಡಿಸಿದ್ದಾರೆ. ಆ ಸಂದರ್ಭದಲ್ಲಿ ನಮ್ಮ ತಂದೆ ಇದ್ದರು, ವಾದಿ ಇದ್ದರು ಬೇರೆ ಯಾರು ಇದ್ದರು ಎಂದು ನನಗೆ ಗೊತ್ತಿಲ್ಲ. ನಾನು ಆ ಸಮಯದಲ್ಲಿ ಇರಲಿಲ್ಲ. 2010 ರಲ್ಲಿ ವಾದಿಗೆ 36 ಗುಂಟೆ ಒತ್ತುವರಿಯಾಗಿದೆ ಎಂದು ಗೊತ್ತಾಯಿತು ನಂತರ ಬಿಟ್ಟುಕೊಡಲು ಪ್ರತಿವಾದಿಗೆ ಕೇಳಿದ್ದಾರೆ.

ಪೊಲೀಸ್ ಠಾಣೆಗೆ ದೂರು ಕೊಟ್ಟಿದ್ದನ್ನು ನಾನು ನೋಡಿಲ್ಲ. ವಾದಿಯು ಒತ್ತುವರಿ ಯಾದ 36 ಗುಂಟೆಗೆ ಮಾತ್ರ ದಾವೆ ಮಾಡಿದ್ದಾರೆ. ನನ್ನ ತಂದೆ ಓ ಎಸ್ 44/2012 ಎನ್ನುವ ದಾವೆ ಮಾಡಿದ್ದರು ಎಂದರೆ ಸರಿ. ಅದರಲಿ ವಾದಿಯು ಹಾಜರಾಗಿ ಖಾತೆ ಮಾಡಿಸಿಕೊಳ್ಳಲು ಯಾವುದೆ ತಕರಾರು ಇಲ್ಲ ಎಂದು ಹೇಳಿದ್ದರು. ಆ ಪ್ರಕರಣದಲ್ಲಿ ಒತ್ತುವರಿ ಆದ ಬಗ್ಗೆ ಹೇಳಿಲ್ಲ. ಆ ಪ್ರಕರಣವನ್ನು ನಮ್ಮ ತಂದೆ ಮತ್ತು ವಾದಿ ರಾಜಿ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಕೇಸ್ ವಜಾ ಆಗಿದೆ ಎಂದು ಸಾಕ್ಷಿ ಹೇಳುತ್ತಾರೆ. ಸ.ನಂ. 1/2 ಮತ್ತು ಸ.ನಂ. 1/3 ಇವುಗಳನ್ನು ಖುದ್ದಾಗಿ ಅಳತೆ ಮಾಡಿಲ್ಲ. ವಾದಿ ಮಾಡಿಸಿದ್ದಾರೆ ಎಂದು ಸಾಕ್ಷಿ ಹೇಳುತ್ತಾರೆ. ವಾದಿಯು ಸಲ್ಲಿಸಿದ ಒಂದು ಸುಳ್ಳು ಪ್ರಕರಣಕ್ಕೆ ಪೂರಕವಾಗಿ ನಾನು ಒಂದು ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ : ಇಲ್ಲ**

**(ಉಖ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**

**ಮಾಗಡಿ.**